ದಿನಾಂಕ : 10-11-2025 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

(ಆರೋಪಿ ನ್ಯಾಯಾಂಗ ಬಂಧನದಲ್ಲಿದ್ದು ವಿಡಿಯೋ ಕಾನ್ಫರೆನ್ಸ ಮುಖಾಂತರ ಹಿಂಡಲಗಾ ಕಾರಾಗೃಹ, ಬೆಳಗಾವಿಯಿಂದ ವಿಚಾರಣೆಗೆ ಹಾಜರುಪಡಿಸಿಕೊಳ್ಳಲಾಯಿತು. ಆರೋಪಿಗೆ ನ್ಯಾಯಾಲಯದ ಚಿತ್ರಣ ಸ್ಪಷ್ಟವಾಗಿ ಕಾಣಿಸುತ್ತಿದೆಯೇ ಮತ್ತು ಧ್ವನಿ ಸ್ಪಷ್ಟವಾಗಿ ಕೇಳಿಸುತ್ತಿದೆಯೇ ಎಂದು ಆರೋಪಿಯಿಂದ ಖಾತರಿಪಡಿಸಿಕೊಂಡು ವಿಚಾರಣೆಯನ್ನು ವಿಡಿಯೋ ಕಾನ್ಫರೆನ್ಸ ಮುಖಾಂತರ ಆರೋಪಿ ಪರ ವಕೀಲರ ಮತ್ತು ಸರ್ಕಾರಿ ವಕೀಲರ ಸಮಕ್ಷಮ ತೆರೆದ ನ್ಯಾಯಾಲಯದಲ್ಲಿ ತೆಗೆದುಕೊಳ್ಳಲಾಯಿತು.)

**ಪಾಟೀ ಸವಾಲು: ಆರೋಪಿಯ ಪರ ಶ್ರೀ.ಎಸ್.ಎನ್.ಪಿ ವಕೀಲರಿಂದ**

ಮೃತ ಬಸಪ್ಪ ನನ್ನ ತಮ್ಮ. ನನ್ನ ತಮ್ಮ ಕುರಿ ಕಾಯುವ ಕೆಲಸ ಮಾಡುತ್ತಿದ್ದು, ಬೇರೆ ಬೇರೆ ಊರಿಗೆ ಕುರಿಗಳನ್ನು ಮೇಯಿಸಿಕೊಂಡು ಹೋಗುತ್ತಿದ್ದನು ಎನ್ನುವುದು ಸರಿ. ನಮ್ಮ ಊರಿಗೆ ಯಾವಗಲಾದರೂ ಬಂದು ಹೋಗುತ್ತಿದ್ದನು ಎನ್ನುವುದು ಸರಿ. ಘಟನೆ ಆದ ಹಿಂದಿನ ದಿನ ನನ್ನ ತಮ್ಮ ನಮ್ಮೂರಿಗೆ ಬಂದಿದ್ದನು ಎನ್ನುವುದು ಸರಿ. ನಮ್ಮೂರಿನಲ್ಲಿ ಹಿರೇಮಠ ಅಜ್ಜನವರ ಗುಡಿ ಇದೆ ಎನ್ನುವುದು ಸರಿ. ನನ್ನ ತಮ್ಮ ಊರಿಗೆ ಬಂದಾಗ ನಮ್ಮ ಮನೆಗೆ ಬಂದು ಊಟ ಮಾಡಿಕೊಂಡು ನಮ್ಮನ್ನು ಮಾತನಾಡಿಸಿಕೊಂಡು ಗುಡಿಯ ಬಳಿ ಹೋಗಿ ಮಲಗಿಕೊಳ್ಳುತ್ತಿದ್ದನು. ನಂತರ ಅಲ್ಲಿಂದ ಕುರಿಗಳನ್ನು ಮೇಯಿಸಿಕೊಂಡು ಹೊರಟು ಹೋಗುತ್ತಿದ್ದನು.

2. 2016 ರಲ್ಲಿ ನನ್ನ ತಮ್ಮ ಆತನ ಹೆಂಡತಿಯನ್ನು ಕೊಲೆ ಮಾಡಿದ್ದಾನೆ ಎಂದು ಆತನ ಮೇಲೆ ಕೇಸ ಇತ್ತು ಎನ್ನುವುದು ಸರಿ. ನನ್ನ ತಮ್ಮ ಸರಾಯಿ ಮಾಡುತ್ತಾನೆ ಎಂದು ಹೇಳಿ ಆತನ ಮೇಲೆ ಅಬಕಾರಿ ಇಲಾಖೆಯವರು ಕೇಸಗಳನ್ನು ಹಾಕಿದ್ದರು ಎನ್ನುವುದು ಸರಿ. ಹಿರೇಮಠ ಅಜ್ಜನವರು ಜಾತ್ರೆಯ ಮೆರವಣಿಗೆಯಲ್ಲಿ ನಮ್ಮ ಊರಿನ ಜನರು ನನ್ನ ತಮ್ಮನ ನಡವಳಿಕೆಯಿಂದ ಬೇಸತ್ತು ಆತನಿಗೆ ಹೊಡೆದು ಊರಿನಿಂದ ಹೊರಗೆ ಕಳುಹಿಸಿದ್ದರು ಎಂದು

ಸೂಚಿಸುವುದು ಸರಿ.

3. ನಮ್ಮ ಊರಿನ ಮತ್ತು ಸುತ್ತಮುತ್ತಲಿನ ಊರಿನ ಜನರಿಗೆ ನನ್ನ ತಮ್ಮ ಬೇಡವಾದ ವ್ಯಕ್ತಿಯಾಗಿದ್ದ ಎನ್ನುವುದಕ್ಕೆ ಸಾಕ್ಷಿ ಆತನು ಒರಟಾದ ವ್ಯಕ್ತಿ ಆಗಿದ್ದನು ಎಂದು ಹೇಳಿದ್ದಾರೆ. ನನ್ನ ತಮ್ಮನಿಗೆ ಗಾಯ ಆಗಿ ಬಿದ್ದ ವಿಚಾರ ತಿಳಿದು ನಾನು ಸ್ಥಳಕ್ಕೆ ಹೋಗಿ ನೋಡಲಾಗಿ ನನ್ನ ತಮ್ಮ ನನ್ನೊಂದಿಗೆ ಮಾತನಾಡಿರುವುದಿಲ್ಲ. ನನ್ನ ತಮ್ಮನಿಗೆ ಜೀವ ಇತ್ತು ಆದರೆ ಮಾತನಾಡಲು ಆಗುತ್ತಿರಲಿಲ್ಲ. ನಾನೇ ನನ್ನ ತಮ್ಮನಿಗೆ ಅಂಬ್ಯುಲೆನ್ಸನಲ್ಲಿ ಆಸ್ಪತ್ರೆಗೆ ಹೋಗಿ ಸೇರಿಸಿದ್ದೇನೆ. ಅಂಬ್ಯುಲೆನ್ಸನ್ನು ಪೋಲಿಸರು ಕರೆಸಿದ್ದರು. ನಾನು ಆಸ್ಪತ್ರೆಗೆ ನನ್ನ ತಮ್ಮನನ್ನು ಕರೆದುಕೊಂಡು ಹೋದ ನಂತರ ಪೋಲಿಸರು ಆಸ್ಪತ್ರೆಗೆ ಬಂದಿದ್ದರು. ಪೋಲಿಸರು ನನ್ನ ತಮ್ಮನನ್ನು ಮಾತನಾಡಿಸುವ ಪ್ರಯತ್ನ ಮಾಡಿದ್ದರು, ಆದರೆ ಆತನಿಗೆ ಮಾತನಾಡಲು ಆಗುತ್ತಿರಲಿಲ್ಲ.

4. ಆಸ್ಪತ್ರೆಯಲ್ಲಿ ನನ್ನ ತಮ್ಮ ಇರುವಷ್ಟು ದಿನ ಅಂದರೆ ಆತನು ತೀರಿಕೊಳ್ಳುವವರೆಗೆ ನಾನು ನನ್ನ ತಮ್ಮನೊಂದಿಗೆ ಆಸ್ಪತ್ರೆಯಲ್ಲಿಯೇ ಇದ್ದೇನು. ನನ್ನ ತಮ್ಮ ತೀರಿಕೊಳ್ಳುವವರೆಗೆ ಆತನಿಗೆ ಮಾತನಾಡಲು ಆಗಿರುವುದಿಲ್ಲ.

5. ನನಗೆ ಓದಲು, ಬರೆಯಲು ಬರುವುದಿಲ್ಲ. ನಾನು ಅವಿದ್ಯಾವಂತನಿದ್ದೇನೆ. ನಿಪಿ−1 ದೂರಿನಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿರುವುದಿಲ್ಲ. ಖಾಲಿ ಕಾಗದದ ಮೇಲೆ ಪೋಲಿಸರು ನನ್ನ ಹೆಬ್ಬಟ್ಟಿನ ಗುರುತನ್ನು ಹಾಕಿಸಿಕೊಂಡಿದ್ದಾರೆ.

6. ಘಟನೆಯ ಮರುದಿನ ಪೋಲಿಸರು ನನ್ನ ತಮ್ಮ ಬಿದ್ದಿದ್ದ ಸ್ಥಳಕ್ಕೆ ಕರೆದುಕೊಂಡು ಹೋಗಿ ನನ್ನನ್ನು ನಿಲ್ಲಿಸಿ ಪೋಟೋ ತೆಗೆದಿರುವುದನ್ನು ಬಿಟ್ಟು ನನಗೆ ಬೇರೆ ವಿಚಾರ ಗೊತ್ತಿರುವುದಿಲ್ಲ ಎಂದು ಸೂಚಿಸುವುದು ಸರಿ. ಪೋಟೋ ತೆಗೆದ ನಂತರ ಪುನಃ ನಾನು ಆಸ್ಪತ್ರೆಗೆ ಹೋದೆನು ಎನ್ನುವುದು ಸರಿ.

7. ನನ್ನ ತಮ್ಮನಿಗೆ ಇಬ್ಬರು ಹೆಣ್ಣುಮಕ್ಕಳು ಇದ್ದು, ಅವರು ತಮ್ಮ ಅಜ್ಜಿ ಊರು ಖಾನಾಪೂರ ತಾಲೂಕಿನ ಬಡಸ ಗ್ರಾಮದಲ್ಲಿ ಅಜ್ಜಿಯೊಂದಿಗೆ ವಾಸ ಇದ್ದಾರೆ. ನನ್ನ ತಮ್ಮ ಆಸ್ಪತ್ರೆಯಲ್ಲಿದ್ದಾಗ ಆತನ ಹೆಣ್ಣು ಮಕ್ಕಳು ಆತನನ್ನು ನೋಡಲು ಬಂದಿರುವುದಿಲ್ಲ, ಆದರೆ ಆತನು ತೀರಿಕೊಂಡ ನಂತರ ಶವ ಸಂಸ್ಕಾರಕ್ಕೆ ಬಂದಿದ್ದರು.

8. ನನ್ನ ತಮ್ಮನಿಗೆ ಯಾರು ಹೊಡೆದರು ಎನ್ನುವ ವಿಚಾರ ನನಗೆ ಗೊತ್ತಿರುವುದಿಲ್ಲ ಎನ್ನುವುದು ಸರಿ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಬೆಳಗಾವಿ.